ಮೇ 2023

# ಸೇವಾ ವಾಣಿ

ಸೇವಾ ಸಂಗಮ

ಆರ್ಬಿಟ್








**ಪೂಜ್ಯ ರಾಬರ್ಟ್ ಮಿರಾಂದಾ**
**ಗುಲ್ಬರ್ಗ ಧರ್ಮಾಧ್ಯಕ್ಷರು**

**ಫಾ. ವಿಕ್ಟರ್ ವಾಸ್**
**ನಿರ್ದೇಶಕರು**

ಜೀವನದಲ್ಲಿ ಸಧನೆ ಮಾಡಬೇಕೆಂಬುವುದು ಪ್ರತಿಯೊಬ್ಬರ ಬಯಕೆ. ಸಾಧನೆ ಮಾಡುವಾಗ ಬರುವ ಅಡ್ಡಿ ಆತಂಕಗಳನ್ನು ಎದುರಿಸಲು ಪರರ ಮಾರ್ಗದರ್ಶನ ಅಗತ್ಯ. ಈ ಮಾರ್ಗದರ್ಶನ ಹಾಗೂ ಮಕ್ಕಳಿಗೆ ಪ್ರೇರಣೆ ನೀಡಲು ಆರ್ಬಿಟ್ ಸಂಸ್ಥೆ ಹಾಗೂ ಸ್ನೇಹ ಸದನ ಸಂಸ್ಥೆ ಎಚ್ ಐ ವಿ ಸೋಂಕಿತವಿರುವ ಮಕ್ಕಳಿಗೆ ಸ್ಪರ್ಶ ಶಿಬಿರವನ್ನು ದಿನಾಂಕ 21.04.2023 ರಿಂದ 24.04.2023 ವರೆಗೆ ಆರ್ಬಿಟ್ ಸಂಸ್ಥೆಯಲ್ಲಿ ಆಯೋಜಿಸಿತ್ತು. ನಾಲ್ಕು ಜಿಲ್ಲೆಗಳ ಸುಮಾರು 40 ಮಂದಿ ಮಕ್ಕಳು ಈ ಶಿಬಿರದಲ್ಲಿ ಭಾಗವಹಿಸಿ ಜೀವನದಲ್ಲಿ ಸಾಧನೆ ಮಾಡುವುದು ಪಣತೊಟ್ಟರು. ಈ ಶಬಿರದಲ್ಲಿ ಅವರಿಗೆ ಪ್ರೇರಣಾತಮಕ್ ಮಾತುಗಳು, ಆಟೋಟ ಸ್ಪರ್ದೆ ಹಾಗೂ ಮ್ಯಾಜಿಕ್ ಶೋಗಳನ್ನು ಆಯೋಜಿಸಲಾಗಿತ್ತು. ಈ ಕಾಯಕ್ರಮವನ್ನು ಫಾ. ಬಾಪು ಮತ್ತು ಕೆ.ಎನ್.ವಿ+ ತಂಡದ ಸದಸ್ಯರು ನಡೆಸಿಕೊಟ್ಟರು.









# ಮಹಿಳಾಭಿವೃದ್ಧಿ ಕಾರ್ಯಕ್ರಮ



ಶ್ರೀಮತಿ ಗುಣಮಂತಿ ಗಂಡ ವಿಠಲ ಇವರಿಗೆ 2 ಜನ ಗಂಡು ಮಕ್ಕಳು 1 ಹೆಣ್ಣು ಮಗಳು 1999 ರಲ್ಲಿ ಆರ್ಬಿಟ್ ಸಂಸ್ಥೆಯ ಅನುಭವ ಪಡೆದು ಇಂದಿರಾ ಮಹಿಳಾ ಸ್ವ-ಸಹಾಯ ಸಂಘದಲ್ಲಿ ಸದಸ್ಯರಾಗಿ ನೇಮಕಗೊಂಡರು. ಇವರು ತುಂಬಾ ಬಡತನದ ಕುಟುಂಬದವರು ಗಂಡ ಹೆಂಡತಿ ಕೂಲಿ ಕೆಲಸ ಮಾಡಿ ತಮ್ಮ ಕುಟುಂಬದ ಜೀವನವನ್ನು ನಡೆಸುತ್ತಿದ್ದರು. ಸಂಘದಿಂದ ಸಾಲವನ್ನು ಪಡೆದುಕೊಂಡು ಸಣ್ಣಪುಟ್ಟ ಕೆಲಸಕ್ಕಾಗಿ ಬಳಸಿಕೊಳ್ಳುತ್ತಿದ್ದರು ಮತ್ತು ಎಮ್ಮೆ ತೆಗೆದುಕೊಂಡು ಹೈನುಗಾರಿಕೆ ಮಾಡಿ ಸಾಲ ಮರುಪಾವತಿ ಮಾಡುತ್ತಿದ್ದರು, ಕೆಲವು ಸದಸ್ಯರ ಅಲಕ್ಷತನದಿಂದ ಸಂಘವು ಕುಂಠಿತಗೊಂಡಿತ್ತು. ಪುನ ಆರ್ಬಿಟ್ ಸಂಸ್ಥೆಯಿಂದ ಸಮಾಜ ಕಾರ್ಯಕರ್ತರು ಸದಸ್ಯರನ್ನು ಭೇಟಿ ಮಾಡಿ ಸಭೆ ಸೇರಿಸಿ ಸಂಘ ರಚಿಸುವಂತೆ ಪ್ರೇರಣೆ ಮಾಡಿದ್ದರಿಂದ ಸಂಘದ ಸಭೆ ಮಾಡುತ್ತಾ, ನೀತಿ ನಿಯಮವನ್ನು ಪಾಲಿಸುತ್ತಾ, ಸಂಘ ಮತ್ತು ಬ್ಯಾಂಕ್ ನಿಂದ ಸಾಲವನ್ನು ತೆಗೆದುಕೊಂಡು ಪುಸ್ತುತವಾಗಿ ಕಿರಾಣಿ ಅಂಗಡಿಯನ್ನು ಇಟ್ಟುಕೊಂಡು ಅದರಿಂದ ಬರುವ ಆದಾಯದಿಂದ ಕುಟುಂಬ ನಡೆಸುತ್ತಿದ್ದಾರೆ. ಸಂಘದಿಂದ ನನಗೆ ಬಹಳ ಅನುಕುಲವಿದೆ. ನನಗೆ ಅನೇಕ ವಿಷಯಗಳ ಕುರಿತು ತಿಳಿಸುತ್ತಾ, ಮಾರ್ಗದರ್ಶನವನ್ನು ನೀಡಿ ಪ್ರೋತ್ಸಾಹಿಸಿದ ಆರ್ಬಿಟ್ ಸಂಸ್ಥೆಗೆ ಅಭಿನಂದನೆಗಳು ತಿಳಿಸಿದ್ದರು.

## "ಆರ್ಬಿಟ್ ಸಂಸ್ಥೆಯ ಪ್ರಯತ್ನದಿಂದ ಚರಂಡಿ ಸ್ವಚ್ಛತೆ"

2020 ರಲ್ಲಿ ಹುಮನಾಬಾದ ತಾಲೂಕಿನ ನಿರ್ಣಾ ಗ್ರಾಮದಲ್ಲಿ ನಾಲ್ಕು ಸ್ವ-ಸಹಾಯ ಸಂಘಗಳು ಸ್ಥಾಪನೆಯಾಗಿತ್ತು. ಈ ಸಂಘದ ಸದಸ್ಯರು ಆರ್ಬಿಟ್ ಸಂಸ್ಥೆಯ ನೀತಿ ನಿಯಮಗಳನ್ನು ಪಾಲಿಸುತ್ತಾ ಹಲವಾರು ಮಾಹಿತಿ ತರಬೇತಿಗಳಲ್ಲಿ ಭಾಗವಹಿಸಿರುತ್ತಾರೆ. ನಾಲ್ಕು ಗೋಡೆಗಳ ಮಧ್ಯ ಇರುವ ಮಹಿಳೆಯರೆಲ್ಲ ಹೊರಗಡೆ ಬಂದು ತಮ್ಮ ಹಕ್ಕುಗಳನ್ನು ಪಡೆಯಲು ಮುಂದಾಗುತ್ತಿದ್ದಾರೆ; ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದಾರೆ, ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಇವರೆ ನಾಯಕತ್ವ ವಹಿಸಿ ಇಲಾಖೆಗಳನ್ನು ಭೇಟಿ ನೀಡಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಮುಂದಾಗುತ್ತಿದ್ದಾರೆ. ನಿರ್ಣ ಗ್ರಾಮದಲ್ಲಿ ಚರಂಡಿ ತುಂಬಿ ಅಲ್ಲಿ ಇರುವ ಜನರಿಗೆ ತುಂಬ ತೊಂದರೆಯಾಗಿರುತ್ತಿತ್ತು, ಈ ಸಮಸ್ಯೆಯನ್ನು ಸಂಘದ ಎಲ್ಲಾ ಸದಸ್ಯರು ದಿನಾಂಕ 15.10.2022 ರಂದು ಆರ್ಬಿಟ ಸಂಸ್ಥೆಯ ಆಶ್ರಯದಲ್ಲಿ ನಿರ್ಣಾ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದರು. ಇದರ ಪರಿಣಾಮವಾಗಿ ದಿನಾಂಕ 10.04.2023 ರಂದು ಚರಂಡಿ ಸ್ವಚ್ಛತೆ ಮಾಡಲಾಗಿದೆ.



# ನವಜೀವನ ಕಾರ್ಯಕ್ರಮ



ದಿನಾಂಕ 04.04.2023 ರಂದು ಚಿಟಗುಪ್ಪಾ ತಾಲೂಕಿನ ಗಾಂಧಿ ನಗರ ಗ್ರಾಮದ ಸಂತ ಮೇರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳಿಗೆ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಕಾರ್ಯಕರ್ತರಾದ ಶ್ರೀ ಅರುಣಕುಮಾರ ರವರು ಮಾನಸಿಕ ಆರೋಗ್ಯ ಎಂದರೇನು?, ಮಾನಸಿಕ ಕಾಯಲೆಯ ಲಕ್ಷಣಗಳ ಕುರಿತು ಮತ್ತು ಅದು ಹೇಗೆ ಬರುತ್ತದೆ ಹಾಗೂ ಹೇಗೆ ತಡೆಗಟ್ಟಬಹುದು ಎಂದು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಗಾಂಧಿ ನಗರ ಕೇಂದ್ರ ಗುರುಗಳು, ಶಾಲೆಯ ಮುಖ್ಯಪಾಧ್ಯಾಯರು, ಶಿಕ್ಷಕರು ಮತ್ತು 78 ವಿಧ್ಯಾರ್ಥಿಗಳು ಭಾಗವಹಿಸಿ ಮಾನಸಿಕ ಕಾಯಲೆಯ ಕುರಿತು ತಿಳಿದುಕೊಂಡರು.

## “ವರ್ಗ ಆಧಾರಿತ ಮತ್ತು ಕ್ಷೇತ್ರ ಆಧಾರಿತ ತರಬೇತಿ”

ಎ.ಪಿ.ಡಿ ಸಂಸ್ಥೆಯ ಡಿವಿಜನ ಮ್ಯಾನೆಜರ್ ಶ್ರೀ ಸಂತೋಷ್ ರವರ ನೇತ್ರತ್ವದಲ್ಲಿ ನವಜೀವನ ಕಾರ್ಯಕ್ರಮದ ತಂಡದವರಿಗೆ ದಿನಾಂಕ 12.04.2023 ರಿಂದ 13.04.2023 ರವರೆಗೆ **“ವರ್ಗ ಆಧಾರಿತ ಮತ್ತು ಕ್ಷೇತ್ರ ಆಧಾರಿತ ತರಬೇತಿಯನ್ನು”** ಹಮ್ಮಿಕೊಳ್ಳಾಯಿತು. ಈ ತರಬೇತಿಯಲ್ಲಿ ಮಾನಸಿಕ ರೋಗ, ಅದರ ಲಕ್ಷಣಗಳು ಮತ್ತು ಅದಕ್ಕೆ ಸೀಗುವ ಚಿಕಿತ್ಸೆಯ ಕುರಿತು ಮಾಹಿತಿ ನೀಡಿದರು. ಮಾನಸಿಕ ರೋಗದಿಂದ ಬಳಲುತ್ತಿರುವವರು ಅನೇಕ ಮೂಡ ನಂಬಿಕೆಗಳಿಗೆ ಮೊರೆ ಹೋಗಿರುತ್ತಾರೆ, ಅವರನ್ನು ಮೂಡ ನಂಬಿಕೆಯಿಂದ ಹೊರತರಲು ಜಾಗೃತಿ ಕಾರ್ಯಕ್ರಮ ಮಾಡುವುದು ಅತಿ ಅವಶ್ಯಕ ಎಂದು ತಿಳಿಸಿದರು. ತದನಂತರ ಕಾರ್ಯಕ್ಷೇತ್ರದಲ್ಲಿರುವ ಕೆಲವು ಮಾನಸಿಕ ಅಸ್ವಸ್ಥರ ಮನೆ ಭೇಟಿ ನೀಡಿ ಅವರ ಆರೋಗ್ಯದ ಬಗ್ಗೆ ವಿಚಾರಿಸಿ ಪಾಲಕರನ್ನು ಯಾವ ರೀತಿ ಮಾನಸಿಕ ಅಸ್ವಸ್ಥರನ್ನು ನೋಡಿಕೊಳ್ಳುವುದರ ಬಗ್ಗೆ ಹಾಗೂ ಸಮಯಕ್ಕೆ ಸರಿಯಾಗಿ ಔಷದಿಗಳನ್ನು ನೀಡಬೇಕೆಂದು ಹೇಳಿದರು. ಈ ತರಬೇತಿಯಿಂದ ಕಾರ್ಯಕರ್ತರಿಗೆ ಮಾನಸಿಕ ಅಸ್ವಸ್ಥರ ಜೊತೆ ಹೇಗೆ ಕಾರ್ಯನಿರ್ವಹಿಸಬೇಕು ಎಂದು ತಿಳಿದಿರುತ್ತದೆ.







# ಮಕ್ಕಳ ಸಹಾಯವಾಣಿ (1098) ಕಾರ್ಯಕ್ರಮ



ದಿನಾಂಕ 23.04.2023 ರಂದು ಆರ್ಬಿಟ್ ಸಂಸ್ಥೆಯಲ್ಲಿ ನಡೆಯುತ್ತಿರುವ ಸ್ಪರ್ಶ ಶಿಬರ (ಹೆಚ್.ಐ.ವಿ ಮಕ್ಕಳ ಶಿಬಿರಕ್ಕೆ) ಮಕ್ಕಳಿಗೆ ಮಕ್ಕಳ ಸಹಾಯವಾಣಿ (1098) ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಫಾ. ಸಂತೋಷ ಬಾಪು ಮತ್ತು ಶಿಬಿರದ ಸ್ವಯಂ ಸೇವಕರು ಭಾಗವಹಿಸಿದ್ದರು. ಮಕ್ಕಳ ಸಹಾಯವಾಣಿ ಕಾರ್ಯಕ್ರಮದ ಸಂಯೋಜಕರಾದ ಶ್ರೀ ವಿಜಯಕುಮಾರ ಬಾಗಡೆ ಮಾತನಾಡಿ ಮಕ್ಕಳ ಹಕ್ಕುಗಳ ಮಾಹಿತಿ ನೀಡಿ ಸಂಕಷ್ಟದಲ್ಲಿರುವ ಮಕ್ಕಳಿಗಾಗಿ 1098 ಕ್ಕೆ ಕರೆ ಮಾಡಿ ಮಕ್ಕಳನ್ನು ರಕ್ಷಿಸಿ ಕಾಪಾಡುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ, ಪ್ರಮುಖವಾಗಿ ಬಾಲ್ಯ ವಿವಾಹಕ್ಕೆ ಒಳಗಾಗುವ ಮಕ್ಕಳು, ಬಾಲ ಕಾರ್ಮಿಕ ದುಡಿತಕ್ಕೆ ಒಳಗಾಗುವ ಮಕ್ಕಳು, ಅತ್ಯಾಚಾರಕ್ಕೆ ಒಳಗಾಗುವ ಮಕ್ಕಳು ಕಂಡು ಬಂದಲ್ಲಿ ಮಕ್ಕಳ ಸಹಾಯವಾಣಿ 1098 ಕ್ಕೆ ಕರೆ ಮಾಡಿ ರಕ್ಷಿಸಿಕೊಳ್ಳಿ ಮತ್ತು ಇನ್ನೊಬ್ಬರನ್ನು ರಕ್ಷಿಸಿ ಎಂದು ಮಕ್ಕಳಿಗೆ ಮಾಹಿತಿ ನೀಡಲಾಯಿತ್ತು.



# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ

## “ಬೆಳವಣಿಗೆಯಲ್ಲಿ ಕುಂಠಿತ ಹೊಂದು ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ”

ದಿನಾಂಕ 12.04.2023 ರಂದು ಹುಮನಾಬಾದ ತಾಲೂಕಿನಲ್ಲಿ ಆರ್ಬಿಟ್ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಕಾರ್ಯಕ್ರಮ ಕಾರ್ಯಕರ್ತರು ಅಂಗನವಾಡಿ ಸರ್ವೆ ಮಾಡಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಗುರುತಿಸಿ ಅವರ ನೊಂದಣಿ ಮಾಡಿ ಅವರಿಗೆ ಆರ್ಬಿಟ್ ಸಂಸ್ಥೆ ಹಾಗೂ ಎ.ಪಿ.ಡಿ ಸಂಸ್ಥೆ ವತಿಯಿಂದ 28 ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ ಮಾಡಲಾಯಿತು. ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ಪಾರಮ್ಮ ರವರು ಬೆಳವಣಿಗೆಯ ಮೊದಲನೆಯ ಹೆಜ್ಜೆಯಾಗಿದೆ ಆರ್ಬಿಟ್ ಸಂಸ್ಥೆಯು ಜನರಿಗೋಸ್ಕರ ಹಗಲಿರಳು ಎನ್ನದೆ ದುಡಿಯುತ್ತಿದ್ದಾರೆ ಎಂದು ಭಾವನೆಯನ್ನು ವ್ಯಕ್ತಪಡಿಸಿದದರು. ತದನಂತರ ಪೌಷ್ಟಿಕ ಆಹಾರ ತೆಗೆದುಕೊಂಡತಹ ವಿಶೇಷ ಚೇತನ ಮಕ್ಕಳ ತಾಯಂದ್ದಿರು ಸಂತೋಷದಿಂದ ಆರ್ಬಿಟ್ ಸಂಸ್ಥೆಗೆ ಅಭಿನಂದನೆ ತಿಳಿಸಿದ್ದಾರೆ**ಸಿಬ್ಬಂದಿ**












## “ಸಿಬ್ಬಂದಿ ಸಾಮರ್ಥ್ಯ ನಿರ್ಮಾಣ ತರಬೇತಿ ”

ದಿನಾಂಕ 13.05.2023 ರಿಂದ 15.04.2023 ರವರೆಗೆ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಕಾರ್ಯಕ್ರಮದ ತಂಡದವರಿಗೆ **“ಸಿಬ್ಬಂದಿ ಸಾಮರ್ಥ್ಯ ನಿರ್ಮಾಣ ತರಬೇತಿಯನ್ನು”** ನಡೆಸಲಾಯಿತ್ತು. ಸಂಪನ್ಮೂಲ ವ್ಯಕ್ತಿಯಾದ ಶ್ರೀ ನರೇಯನ್ ಸ್ಪೀಚ್ ಥೆರಪಿಸ್ಟ್ ರವರು ಮಕ್ಕಳ ಜೊತೆ ಪ್ರಾಯೋಗಿಕವಾಗಿ ಹೇಗೆ ಚಟುವಟಿಕೆ ಮಾಡಬೇಕು ಎಂದು ಅರ್ಥವಾಗುವ ರೀತಿಯಲ್ಲಿ ತಿಳಿಸಿ ಹೇಳಿಕೊಟ್ಟರು.

.



# ಯಶಸ್ವಿ ಕಥೆ



**ಹೆಸರು: ಖದೀರ ಪಾಶಾ**

**ತಂದೆ: ಖಾಜಾ ಪಾಶಾ**

**ವಯಸ್ಸು: 26**

**ಗ್ರಾಮ: ಕಪ್ಪರಗಾಂವ**

**ಶಿಕ್ಷಣ: ಇಂಜಿನಿಯರಿಂಗ**

2019 ಮೇ ತಿಂಗಳ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ತಂಡದವರು ಮಾನಸಿಕ ಅಸ್ವಸ್ಥರ ಸರ್ವೆ ಮಾಡಲು ಕಪ್ಪರಗಾಂವಕ್ಕೆ ಹೋದಾಗ ಈ ವ್ಯಕ್ತಿಯು ಕಂಡುಬಂದಿರುತ್ತಾರೆ. ಅವರ ಮನೆಗೆ ಭೇಟಿ ನೀಡಿದಾಗ ಅವರಲ್ಲಿ ಅನೇಕ ಸಮಸ್ಯೆಗಳಿದ್ದು, ಅವರು ಕಡುಬಡವರಾಗಿದ್ದರು, ಅವರ ತಂದೆ ಹೇಳಿದ ಪ್ರಕಾರ ಹೆಚ್ಚು ಓದುವುದರ ಕಡೆ ಗಮನ ಕೊಟ್ಟದ್ದರಿಂದ ಮಾನಸಿಕವಾಗಿದ್ದಾನೆ. ಮನೆಯಲ್ಲಿ ಜಗಳ ಮಾಡುವುದು, ಬೈಯುವುದು, ರಾತ್ರಿಯಲ್ಲಿ ಮನೆಯಲ್ಲೆ ಇರುತಿರಲಿಲ್ಲ ಮತ್ತು ಊರಲ್ಲಿ ಯಾರನ್ನು ಬೇಕಾದರು ಕಲ್ಲು ತೆಗೆದುಕೊಂಡು ಹೊಡೆಯುತ್ತಿದ್ದನು ಮತ್ತು ಸಂಸ್ಥೆಯ ಸಿಬ್ಬಂದಿಯ ಏದುರಲ್ಲೆ ತಂದೆಯನ್ನು ಏತ್ತಿ ಬಿಸಾಡಿದನು. ಅವನು ಸ್ವಂತ ಕ್ರಿಯೇಗಳು ಕೂಡ ಮರೆತ್ತಿದ್ದನು.

ನಂತರ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರು 2019 ರಿಂದ ಇಲ್ಲಿಯವರೆಗೆ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಔಷಧಿಗಳನ್ನು ನೀಡುತ್ತಿದ್ದರಿಂದ ಅತನಲ್ಲಿ ಈಗ ಅನೇಕ ಬದಲಾವಣೆಗಳ ಕಂಡು ಬಂದವು ಮತ್ತು ತನ್ನ ಸ್ವ-ಕ್ರೀಯೆಗಳು ತಾನೆ ಮಾಡುಕ್ಕೊಳ್ಳುತ್ತಿದ್ದಾನೆ. ಈಗ ತಂದೆಯ ಜೋತೆ ಹೊಲದಲ್ಲಿ ಕೆಲಸಕ್ಕೆ ಸಹಾಯ ಮಾಡುತ್ತಿದ್ದಾನೆ, ಇತ್ತಿಚಿಗೆ ಅಂದರೆ ಕಳೆದ ತಿಂಗಳಲ್ಲಿ ತಂಡದವರು ಕೂಡ ಆತನ ಮನೆ ಭೇಟಿ ನೀಡಿದಾಗ ಅವನಲ್ಲಿನ ಬದಲಾವಣೆಗಳು ನೋಡಿದರು.

# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ

## ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳಿಗೆ ಪೌಷ್ಟಿಕ ಆಹಾರ ಆರ್ಬಿಟ್ ಸಂಸ್ಥೆ ಹುಮನಾಬಾದ್

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್ ಏಪ್ರಿಲ್ 12: ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಒಂದನೆಯ ಫಾದರ್ ವಿಕ್ಟರ್ ಪ್ರೊಜೆಕ್ಟ್ ಮ್ಯಾನೇಜರ್ ಸಿಸ್ಟರ್ ವಿಲ್ಮಾ . ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಸಂಯೋಜಕರಾದ ಮಮತಾ ಜಿ ನಾಯಕ್ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ವಿಶೇಷ ವಿಕಲಚೇತನ ಮಕ್ಕಳನ್ನು ಗುರುತಿಸಿ ಅವರಿಗೆ ಪೌಷ್ಟಿಕ ಆಹಾರ ವಿತರಣೆ ಹಳ್ಳಿಖೇಡ್(ಬಿ) ದುಬಲಗುಂಡಿ ವಲಯದಲ್ಲಿ ಮಾಡಲಾಯಿತು.




ವಿಶೇಷ ವಿಕಲಚೇತನ ಮಕ್ಕಳನ್ನು ಅಂಗನವಾಡಿ ಸರ್ವೆ ಮತ್ತು ಮನೆಗೆ ಭೇಟಿ ನೀಡಿ ಅವರನ್ನು ಪತ್ತೆ ಹಚ್ಚಲಾಯಿತು ಪತ್ತೆ ಹಚ್ಚಿ ಅವರಿಗೆ ನಮ್ಮ ಸಂಸ್ಥೆಗೆ ನೊಂದಣಿ ಮಾಡಿಕೊಂಡು ಅವರಿಗೆ ನಮ್ಮ ಆರ್ಬಿಟ್ ಸಂಸ್ಥೆಯಲ್ಲಿ ಸಿಗುವ ಸವಲತ್ತುಗಳನ್ನು ಜನರಿಗೆ ತಲುಪಿಸುತಿದ್ದೇವೆ. ಬೆಳವಣಿಗೆಯ ಮೊದಲನೇ ಹೆಜ್ಜೆ ಆಗಿದೆ ಆರ್ಬಿಟ್ ಸಂಸ್ಥೆಯವರು ಜನರಿಗೋಸ್ಕರ ಹಗಲಿರಳು ಎನ್ನದೆ ದುಡಿಯುತ್ತಿದ್ದಾರೆ.

ಪೌಷ್ಟಿಕ ಆಹಾರ ತೆಗೆದುಕೊಂಡಂತ ತಾಯಂದಿರು ಸಂತೋಷದಿಂದ ಆರ್ಬಿಟ್ ಸಂಸ್ಥೆಗೆ ಅಭಿನಂದನೆ ತಿಳಿಸಿದ್ದಾರೆ.

ಇದೆ ಸಂದರ್ಭದಲ್ಲಿ ಹಸಿನ್ ಪಟೇಲ್ ಪುರಸಭೆ ಸದಸ್ಯರು ಹಳ್ಳಿಖೇಡ್ (ಬಿ), ಪಾರಮ್ಮ ಅಂಗನವಾಡಿ ಕಾರ್ಯಕರ್ತೆ, ಶಾಂತಕುಮಾರ್, ಶಿವಾಜಿ, ಶಾಮ್ ನಾಡಕಭೇರಿ, ಅಗಸ್ಟಿನ್, ರೇಖಾ, ಸವಿತಾ, ಸುಧಾರಾಣಿ, ಶ್ವೇತಾ, ಅನ್ನಪೂರ್ಣ ಅನೇಕ ಸಿಬ್ಬಂದಿಗಳು ಭಾಗಿಯಾಗಿದರು.

# ಸೇವಾ ಸಂಗಮ ಸಂಸ್ಥೆ ಕಲಬುರಗಿ ಕಾರ್ಯಕ್ರಮ

## ಉಜ್ಜೀವನ ಕಾರ್ಯಕ್ರಮ



ದಿನಾಂಕ 18-04-2023 ರಂದು ಕಲಬುರಗಿ ಜಿಲ್ಲೆಯ ನಂದೂರ (ಕೆ) ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಅಡಿಯಲ್ಲಿ ಉಜ್ಜೀವನ ಮೂರನೆ ಹಂತದ ಯೋಜನೆಯ ಅಡಿಯಲ್ಲಿ ಸಂಯೋಜಕರು ಮತ್ತು ಕಾರ್ಯಕರ್ತರು ರಾಷ್ಟೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಮಾಹಿತಿ ನೀಡಿ 150 ಜನರ ಅರ್ಜಿಗಳನ್ನು ಗ್ರಾಮ ಪಂಚಾಯತಗೆ ಸಲ್ಲಿಸಿ ಆದರಲ್ಲಿ 80 ಜನರು ಕಾರ್ಡ ಪಡೆದು ಕೊಂಡು ಕೆಲಸವನ್ನು ಮಾಡುತ್ತಿದ್ದಾರೆ ಪ್ರತಿಯೊಬ್ಬರಿಗೆ ಒಂದು ದಿನದ ಸಂಬಳ 316/- ರೂಪಾಯಿ ಒಬ್ಬರಿಗೆ ಒಂದುವಾರಕ್ಕೆ 2528 ಒಟ್ಟು ಮೊತ್ತ 202240/- ರೂಪಾಯಿ ಪಡೆದುಕೊಂಡರು.



ದಿನಾಂಕ 11/04/2023 ರಂದು ಕಲಬುರಗಿ ಜಿಲ್ಲೆಯ ತಿಳಿಗೂಳ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಮೂರನೆ ಹಂತದ ಯೋಜನೆಯ ಆಡಿಯಲ್ಲಿ ಸಂಯೋಜಕರು ಮತ್ತು ಕಾರ್ಯಕರ್ತರು. 20 ಜನರಿಗೆ ಸಂಘ ರಚನೆ ಮಾಡುವ ಕುರಿತು ಮಾಹಿತಿ ನೀಡಿಲಾಯಿತು. ಸಂಘದ ನೀತಿ ನಿಯಮದ ಅರಿವು ತಿಳಿಸಿ 15ಜನರ ಒಗ್ಗೂಡಿ ಒಂದು ರೈತ ಮಹಿಳಾ ಸ್ವ ಸಹಾಯ ಸಂಘ ರಚನೆ ಮಾಡಲಾಯಿತ್ತು ಸಂಘದ ಹೆಸರು ಹಾದಿಬಸವ ಈ ಸಂಘದಲ್ಲಿ 15 ಜನರು. ಆವರಿಗೆ ಸಂಘ ನೋಂದಣಿ ಮಾಡಿ ಪಾಸ ಬುಕ್ಕ ಮಾಡಿಸಲಾಯಿತು.

## ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ



### "ಬಾಲ್ಯ ವಿವಾಹದ ಬಗ್ಗೆ ಮಾಹಿತಿ ಕಾರ್ಯಕ್ರಮ"

ದಿನಾಂಕ 18-04-23 ರಂದು ಸೇವಾ ಸಂಗಮ ಸಂಸ್ಥೆಯಿಂದ ಕಬಿರೆಸ್ತಾನ ಏರಿಯದಲ್ಲಿ 15 ಜನ ಮಹಿಳೆಯರಿಗೆ ಬಾಲ್ಯ ವಿವಾಹದ ಬಗ್ಗೆ ಮಾಹಿತಿ ಕಾರ್ಯಕ್ರಮ ಮಾಡಲಾಯಿತ್ತು. ಬಾಲ್ಯ ವಿವಾಹ ಮಾಡುವುದರಿಂದ ಅನೇಕ ಸಮಸ್ಯೆಗಳು ಯದುರಿಸಬೇಕಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ತಾಯಿಯಾಗುವ ಈ ಹೆಣ್ಣು ಮಕ್ಕಳು ಮುಂದೆ ಹೆಚ್ಚಿನ ತೊಂದರೆ ಆನುಭವಿಸುತ್ತಾರೆ, ಆನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆಗಳಿವೇ ಹುಟ್ಟುವ ಮಕ್ಕಳು ಸದೃಢರಾಗದೆ ವಿಕಲಾಂಗ ಮಕ್ಕಳು ಜನಿಸಿ ಆನಾರೋಗ್ಯ ಸಮಸ್ಯೆ ಉಂಟಾಗಬಹುದು. ವಯಸ್ಸಿಗೆ ಮೀರಿದ ಜವಾಬ್ದಾರಿ ಹೊರಿಸುವುದರಿಂದ ಹೇಣ್ಣು ಮಾನಸಿಕ ದೌರ್ಬಲ್ಯತೆಗೆ ಒಳಗಾಗಿ ಖಿನ್ನತೆಯನ್ನು ಆನುಭವಿಸುತ್ತಾರೆ. ಆದ್ದರಿಂದ ಬಾಲ್ಯವಿವಾಹದ ತಡೆಗಟ್ಟಿ ಮಕ್ಕಳ ಬಾಳು ಬೆಳಗಿಸಬೇಕು, ಭಾರತದಲ್ಲಿ ಬಾಲ್ಯ ವಿವಾಹ ನಿಷೇದ ಕಾನೂನು ಜಾರಿಯಲ್ಲಿದೆ ಅದಕ್ಕೆ ನಾವೇಲ್ಲರು ಕಾನೂನಿನ ಚೌಕಟ್ಟಿನಲ್ಲಿ ಜೀವನ ನಡೆಸಬೇಕು ಎಂಬ ಸಂದೇಶವನ್ನು ನೀಡಲಾಯಿತ್ತು.



ದಿನಾಂಕ 30.04.2023 ರಂದು ಕಲಬುರಗಿ ಜಿಲ್ಲೆಯ NGO ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆಯ ವತಿಯಿಂದ ಇಐ–ಇಇ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಸರ್ಕಾರಿ ಸೌಲಭ್ಯಗಳ ಬಗ್ಗೆ ಮಾಹಿತಿ ಕಾರ್ಯಕ್ರಮ ಹಮ್ಮಿಕೊಳಲಾಯಿತು. ಬೇಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳಿಗೆ ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳು ಮತ್ತು ಅಂಗವಿಕಲಕರಿಗೆ ಇರುವ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ನೀಡಲಾಯಿತ್ತು. ಸರ್ಕಾರದಿಂದ ಮಾಸಿಕ ವೇತನ ಸುಮಾರು 1400 ರೂಪಾಯಿ ತಿಂಗಳಿಗೆ ಬರುತ್ತದೆ. ಈ ಸೌಲಭ್ಯವನ್ನು ವಿಕಲಚೇತನರು ಹಾಗೂ ಬೇಳವಣಿಗೆ ಕುಂಠಿತ ಮಕ್ಕಳು ಇದರ ಲಾಭವನ್ನು ಪಡೆಯಬೇಕು ಎಂದು ತಿಳಿಸಲಾಯಿತ್ತು. ಯಾವುದೆ ಒಂದು ಸೌಲಭ್ಯವನ್ನು ಪಡೆಯಬೇಕಾದರೆ ಅದಕ್ಕೆ ತನ್ನದೆಯಾದ ಕ್ರೀಯನ್ನು ಹೋಂದಿರುತ್ತದೆ. ಅಂತರಜಾಲದಲಿ ಅರ್ಜಿಯನ್ನು ಹಾಕಬೇಕು. ಅರ್ಜೀಯನ್ನು ಹತ್ತಿರದ ಸರ್ಕಾರಿ ಜೀಲ್ಲಾ ಆಸ್ಪತ್ರೆ ಅಥವಾ ತಾಲ್ಲೂಕು ಆಸ್ಪತ್ರೆಯಲ್ಲಿ ಹಾಕಬೇಕು. ಅಲ್ಲಿ ವೈಧ್ಯರು ಪರಿಕ್ಷೇಮಾಡಿ ಪ್ರಮಾಣವನ್ನು ನೀಡುತ್ತಾರೆ ಅದರ ನಂತರ ಹತ್ತಿರದ ನೇಮ್ಮದಿ ಕೇಂದ್ರದಲ್ಲಿ ಅರ್ಜೀ ಹಾಕಬೆಕು. ಸ್ವಲ್ಪ ದಿನಗಳ ನಂತರ ಹಣ ನಿಮ್ಮ ಖಾತೆಗೆ ಜಮಾ ಆಗುತ್ತದೆ. ಇದರ ಬಗ್ಗೆ ಮಾಹಿತಿಯನ್ನು ನೀಡಲಾಯಿತ್ತು ಮತ್ತು ಈ ಮಾಹಿತಿಯನ್ನು ನಿಮ್ಮ ನೇರೆಯವರಿಗೆ ತಿಳಿಸಬೇಕೆಂದು ತಿಳಿಸಲಾಯಿತ್ತು. ಈ ಒಂದು ಕಾರ್ಯಕ್ರಮದಲ್ಲಿ 18 ಜನರು ಪೋಷಕರು ಭಾಗವಹಿಸಿದರು.

ದಿನಾಂಕ 25–04–2023 ರಂದು ಮೆಂಡುಗಲ್ಲಿ ಅಂಗನವಾಡಿ ಕೇಂದ್ರದಲ್ಲಿ ಚುಚ್ಚ ಮದ್ದು ಕಾರ್ಯಕ್ರಮವನ್ನು ಹಮ್ಮಿಕೊಡಿದ್ದರು ಆದ್ದರಲ್ಲಿ ಆರ್ಲಿ ಇಂಟರವೇನಶನ್ & ಆರ್ಲಿ ಎಜುಕೇಶನ್ ಕಾರ್ಯಕ್ರಮದ ಬಗ್ಗೆ ಮಾಹಿತಿಯನ್ನು ನೀಡಲಾಯಿತ್ತು. ಆಬೇದಾ ಬೇಗಂ ಅಂಗನವಾಡಿ ಕಾರ್ಯಕರ್ತೆ ಇದ್ದರು ಹಾಗೂ ಪಾಲಕರು 13 ಜನ ಭಾಗವಹಿಸಿದ್ದರು. ಮಕ್ಕಳು ನಡೆದಾಡಲು, ಕುಳಿತುಕೊಳಲ್ಲು ಮತ್ತು ಕಿವಿಕೇಳದೆ ಇರುವುದು ಮಾತನಾಡಲು ತೊಂದರೆ ಅತಂಹ ಮಕ್ಕಳು ನಿಮ್ಮ ಹತ್ತಿರ ಅಥವಾ ಗ್ರಾಮದಲ್ಲಿದ್ದರೆ ನಮ್ಮಗೆ ತಿಳಿಸಬೇಕು. ಇಂತಹ ಮಕ್ಕಳಿಗೆ ಸರಿಯಾದ ಚಟುವಟಿಕೆ ಮಾಡುವುದರಿಂದ ಮಗುವಿನಲ್ಲಿ ಬದಲಾವಣೆ ಕಾಣಬಹುದು. ಮಕ್ಕಳಿಗೆ ಮನೆಯೇ ಮೂದಲ ಪಾಠ ಶಾಲೆ ತಾಯಿಯೇ ಮೂದಲ ಗುರು ಎನ್ನುವಹಾಗೆ ಮಕ್ಕಳು ಕುಟುಂಬದ ಸದಸ್ಯರಿಂದ ಹೇಚ್ಚು ವಿಷಯಗಳು ಮಕ್ಕಳು ಕಲಿಯುತಾರೆ. ಮಕ್ಕಳನ್ನು ಕುಟುಂದಲ್ಲಿ ಹೇಚ್ಚಿನ ಅವಕಾಶವನ್ನು ಒದಗಿಸುವ ಕಾರ್ಯ ಮಾಡಬೇಕು ಎಂದು ತಿಳಿಸಲಾಯಿತ್ತು.



**"ಬೇಳವಣಿಗೆ ಕುಂಠಿತ ಮಕ್ಕಳಿಗೆ ಅವಕಾಶ ನೀಡಬೇಕು"**



ದಿನಾಂಕ 11–04–2023 ರಂದು ಕಲಬುರಗಿ ತಾಲ್ಲೂಕಿನ ತಿಳಗೂಳ ಗ್ರಾಮದಲ್ಲಿ ಶ್ರೀಪ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಅಡಿಯಲ್ಲಿ ಜಾಗೃತಿ ಕಾರ್ಯಕ್ರಮ ಹಮ್ಮಿಕೋಳ್ಳಲಾಗಿತ್ತು. ಬೇಳವಣಿಗೆ ಕುಂಠಿತ ಮಕ್ಕಳಿಗೆ ಅವಕಾಶ ಒದಗಿಸಿಕೋಡಬೇಕು. ನಾವು ಹೇಗೆ ಸಾಮಾನ್ಯ ಮಕ್ಕಳನ್ನು ನೋಡಿಕೊಳ್ಳುತೆವೆಯೆ ಹಾಗೆಯೇ ಇಂತಹ ಮಕ್ಕಳನ್ನು ನೋಡಿಕೋಳ್ಳಬೇಕು. ಈ ಮಕ್ಕಳನ್ನು ನಾವು ಸಮಾನವಾಗಿ ಕಾಣುವುದರ ಜೋತೆಗೆ ಮನೆಯಲ್ಲಿ ಬೇಳೆಯುವುದಕ್ಕೆ ಅವಕಾಶದ ವಾತವರ್ಣ ಮನೆಯಿಂದಲೇ ಪ್ರಾರಂಭವಾಗಬೇಕು, ತದನಂತರ ಮಕ್ಕಳನ್ನು ಸಮುದಾಯದಲ್ಲಿ ಭಾಗವಹಿಸುವಂತೆ ಮಾಡಬೇಕು ಅದರಿಂದ ಮಕ್ಕಳ ಭಾವನೆಯಲ್ಲಿ ಬದಲಾವಣೆಯಾಗುವುದರ ಜೋತೆಗೆ ಮಕ್ಕಳು ವಯಸ್ಸಿಗೆ ತಕ್ಕತೆ ಬೇಳೆಯಲು ಸಾಧ್ಯಾವಾಗುತ್ತದೆ. ನಿಮ್ಮಲಿ ಯಾವುದೆ ಮಕ್ಕಳು ನಿಮ್ಮ ಸಮುದಾಯದಲ್ಲಿ ಅಥವಾ ಊರಲ್ಲಿ ಕಂಡುಬಂದರೆ ಸೇವಾ ಸಂಗಮ ಸಂಸ್ಥೆಗೆ ತಿಳಿಸಲು ಹೇಳಲಾಯಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 40 ಜನ ಭಾಗವಹಿಸಿದರು.

# Organization of Bidar Integral Transformation (ORBIT)



# APPEAL

## *Remove 'DIS' From DISABLE*

(Only for Indian citizens)

**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

## *Sponsor a Child with Rs. 500 per Month /6000 per Year.*

*Our goal is to "Focus on what children can do, their abilities, rather than their disability."*

## ACTION PLANS :

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**

**ADDRESS**
ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT

Note : Please WhatsApp your address to the above given number after sending money.